ಕೋಲಾರ ಡಿಸ್ಟ್ರಿಕ್ಟ್.

ತಾರೀಖು 21ನೇ ಆಗಸ್ಟ್ 1884.

ಇದರಿಂದ ತಿಳಿಯಪಡಿಸುವದೇನಂದರೆ, ಈ ಕೆಳಗೆ ತಪಶೀಲ್‌ಮಾಡಲ್ಪಟ್ಟಿರುವ ರಿಜಿಸ್ಟ್ರಾದ 3 ದಸ್ತೈವಜುಗಳು 2 ವರುಷಗಳಿಂದ ಮುಳಬಾಗಲ್ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಬೇವಾರಸಾಗಿ ನಿಂತಿರುತ್ತೆ. ಬಾಧ್ಯತೆವುಳ್ಳವರು ಈ ನೋಟಿಫಿಕೇಷ್ಣ ತಾರೀಖು ಲಾಗಾಯತು 1 ತಿಂಗಳ್ಳಲ್ಲಿ ಮುಳಬಾಗಲ್ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಹಾಜರಾಗಿ ವಾಜಬಿಯಾದ ಫೀಜ್ ಪಾವತೀಮಾಡಿ ಡಿಟೋ ದಸ್ತೈವಜುಗಳನ್ನು ವಾಪಸ್ ಪಡಿಯಬಹುದು. ಹಾಗೆ ವಾಯಿದೇ ಒಳಗೆ ಹಾಜರಾಗದೇ ಹೋದರೆ ಅವುಗಳನ್ನ ಆಕ್ಟಿನ 85ನೇ ಸೆಕ್ಷನ್ ಮೇರಿಗೆ ನಾಶ ಮಾಡಲ್ಪಡುವದು.

ಆಫೀಸ್ ಹೆಸರು.	ಬುಕ್ಕು ನಂಬರ್ ಮತ್ತು ದಸ್ತೈವಜಿನ ನಂಬರ್.	ದಸ್ತಾವೇಜು ಬರದುಕೊಟ್ಟವರ ಹೆಸರು ವಗೈರೇ.	ಬರಸಿಕೊಂಡವರ ಹೆಸರು ವಗೈರೇ.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟರಾದ ತಾರೀಖು.	ತಪಶೀಲು.
ಮುಳಬಾಗಲ್ ಸಬ್ ರಿಜಿಸ್ಟ್ರಿ ಆಫೀಸ್.	1ನೇ ನಂಬರ್ ಬುಕ್ಕು 1880-1881ನೇ ಇಸವಿ ಎ 72ನೇ ನಂಬರ್.	ಕೋಲಾರ ತಾಲ್ಲೂಕು ಕಾಮಸಂದ್ರದಲ್ಲಿ ಇರುವ ವೈಶ್ಯತಿಪ್ಪೂರು ಚಂಗಲರಾಯಪಟ್ಟೆವಮಗ ನಾಗಿಶಟ್ಟಿ	ಕೋಲಾರದಲ್ಲಿ ಇರುವ ವೈಶ್ಯ ಬೊಗ್ಗರಂ ವೆಂಕಟಶಾಮಯ್ಯನ ಮಗ ಲಕ್ಷ್ಮಯ್ಯ	29ನೇ ಜೂ 1882	17ನೇ ಫೆಬ್ರವರೀ 1882	7ನೇ ಸೆಪ್ಟಂಬರ್ 1880	50 ರೂಪಾಯಿನ ಜಮ್ಮಿಕ್ರಯಪತ್ರ.
	ಡಿಟೋ ಬುಕ್ಕು 1881-82ನೇ ಇಸವಿ 79ನೇ ನಂಬರ್.	ಮುಳಬಾಗಲ್‌ನಲ್ಲಿಯಿರುವ ಸ್ಮಾರ್ತ ಬ್ರಾಹ್ಮಣ ರೇವಣೂರ ವೆಂಕಟನಾರಣಭಟ್ಟರವಮಗ ತಿಮ್ಮಣಭಟ್ಟ	ಮುಳಬಾಗಲ್ ತಾಲ್ಲೂಕು ಮುಡಿಯನೂರಲ್ಲಿರುವ ಸ್ಮಾರ್ತ ಬ್ರಾಹ್ಮಣ ವೆಂಕಟಸುಬ್ಬಾಶಾಸ್ತ್ರಿಗಳ ಮಗ ವೆಂಕಟೇಶ ಶಾಸ್ತ್ರಿ				80 ರೂಪಾಯಿನ ವೃತ್ತಿಜಮ್ಮಿಗಳನ್ನು ಆಧಾರಮಾಡಿ ಬರದುಕೊಟ್ಟ ಪತ್ರ.
	ಡಿಟೋ ಬುಕ್ಕು 1882-83ನೇ ಇಸವಿ 17ನೇ ನಂಬರ್.	ಮುಳಬಾಗಲ್ ತಾಲ್ಲೂಕು ಬಾದೆನಹಳ್ಳಿಯಲ್ಲಿರುವ ಕಮ್ಮಜಾತಿ ಸಬ್ಬಂಣನ ಮಗ ದೊಡ್ಡ ಗಂಗಣ್ಣ	ಮುಳಬಾಗಲ್ ತಾಲ್ಲೂಕು ಬಾದೆನಹಳ್ಳಿಯಲ್ಲಿ ಯಿರುವ ಕಮ್ಮಜಾತಿ ರಂಗೇಗೌಡನ ಮಗ ವೆಂಕಟನುಬ್ಬಂಣ				190 ರೂಪಾಯಿನ ಜಮ್ಮಿಕ್ರಯಪತ್ರ.

ಶ. ಸುಬ್ಬರಾವ್,
ರಿಜಿಸ್ಟ್ರಾರ್.

ಮೈಸೂರು ಡಿಸ್ಟ್ರಿಕ್ಟ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜ್‌ರಯವರ ಕೋರ್ಟ್‌ನಲ್ಲಿ.

ಸ್ಯ 1884ನೇ ಇಸವಿ ಅರ್ಜೀ ನಂಬರ್ 272.

ಮೃತಪಟ್ಟ ಕೆಂಗೇಗೌಡನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ನಿಂಗೇಗೌಡ, ಮೃತಪಟ್ಟ ಸದರೀ ಕೆಂಗೇಗೌಡನಿಗೆ ಚಿಕ್ಕಪ್ಪ ಆಗಬೇಕೆಂಬ ಹಕ್ಕುದಾರೀ ಮೇಲೆ ಯಡತೊರೆ ತಾಲ್ಲೂಕು ಕೃಷ್ಣರಾಜಕಟ್ಟೆ ಹೋಬಳಿ ಮಥರನಹಳ್ಳಿ ಕೊಪ್ಪಲ ಸ್ಥಳದ ಸದರೀ ನಿಂಗೇಗೌಡನು ಸದರೀ ವಾಸಸ್ಥನಾಗಿ ಮೃತಪಟ್ಟ ಕೆಂಗೇಗೌಡನ ಜೀಂದಗಿಬಗ್ಯಾಗಿ ಬರತಕ್ಕ 300 ರೂಪಾಯಿಗಳ ಸೂಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟು ಬ್ಯೇ ಈ ಕೋರ್ಟ್‌ಗೆ ಖಾಯಿಷ್ ಮಾಡಿರುತ್ತಾನೆ.